**ದಿಃ22.07.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಶ್ರೀ.ಸಿ.ಎಸ್.ಆರ್. ದೂರುದಾರರ ಪರ ವಕೀಲರಿಂದ**

ನಾನು ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ಸಲ್ಲಿಸಿದ ದೂರು ಆಗಿದ್ದು, ಅದರ ಮೇಲೆ ನನ್ನ ಸಹಿ ಇದೆ, ಅದನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಾನು ಆರೋಪಿತರ ಚಿಟ್ ಅಗ್ರಿಮೆಂಟ್ ನ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ.2 ಎಂದು ಗುರುತಿಸಲಾಯಿತು. 34 ರಸೀದಿಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳು ಒಟ್ಟು 18 ಪುಟಗಳಿದ್ದು ಅವುಗಳನ್ನು ನಿಪಿ.3 ರಿಂದ 20 ಎಂದು ಗುರುತಿಸಲಾಯಿತು. ಆರು

ಪುಟಗಳುಳ್ಳ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ.21 ಎಂದು ಗುರುತಿಸಲಾಯಿತು. ಸಿಸಿ ನಂ.19529/2007 ರ ಕೇಸಿನ ತೀರ್ಪಿನ ದೃಡೀಕೃತ ನಕಲನ್ನು ನಿಪಿ.22 ಎಂದು ಗುರುತಿಸಲಾಯಿತು. ಸಿಸಿ ನಂ.19529/2007 ರ ಕೇಸಿನ ಪಿ.ಜಿ. ಕೃಷ್ಣ ಮೂರ್ತಿ ರವರ ಮುಖ್ಯ ವಿಚಾರಣೆ ಮತ್ತು ಪಾಟಿಸವಾಲಿನ ದೃಡೀಕೃತ ನಕಲನ್ನು ನಿಪಿ.23 ಎಂದು ಗುರುತಿಸಲಾಯಿತು. ಸಿಸಿ ನಂ.19529/2007 ರ ಕೇಸಿನ ವಾದಿರಾಜು, ಡಿಡಬ್ಲ್ಯು-1 ರವರ ಮುಖ್ಯ ವಿಚಾರಣೆ ಮತ್ತು ಪಾಟಿಸವಾಲಿನ ದೃಡೀಕೃತ ನಕಲನ್ನು ನಿಪಿ.24 ಎಂದು ಗುರುತಿಸಲಾಯಿತು.

**ಆರೋಪಿ ಪರ ವಕೀಲರು ಪಾಟೀಸವಾಲನ್ನು ದೋಷರೋಪಣೆ ರಚನೆಯ ನಂತರ ಮಾಡುವುದಾಗಿ ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಂ., ಬೆಂಗಳೂರು.**